ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾ ಮತ್ತು ಪಾ ವಿಭಾಗ,
ಚಾ.ವಿ.ಸ.ನಿ.ನಿ. ಮಡಿಕೇರಿ – 571201
Telephone No : 08274-255319

CHAMUNDESHWARI ELECTRICITY SUPPLY CORPORATION LIMITE
(A Government of Karnataka Undertaking)
O & M Division,
CESC, Madikeri - 571201
Web site: www.cescmysore.org
E-mail ID : cesceemdk@gmail.com

Company Identity Number :- (CIN): U40109KA2004SGC035177

ಕ್ರಮಾಂಕ: ಕಾನಿಇಂ(ವಿ)/ಸಕಾನಿಇಂ(ಕ)/ಸಇಂ(ತಾಂ)/2021-22/ 4260 ದಿನಾಂಕ: 13-01-2022

# ಸಭಾ ನಡಾವಳಿ

ದಿನಾಂಕ: 24-12-2021 ರಂದು ಗೋಣಿಕೊಪ್ಪಲು ಉಪ-ವಿಭಾಗ ಕಛೇರಿಯಲ್ಲಿ **ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)**ರವರ ನೇತೃತ್ವದಲ್ಲಿ ನಡೆದ **ಜನ ಸಂಪರ್ಕ** ಸಭೆಯಲ್ಲಿ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಅಶೋಕ, .ಕಾ.ನಿ.ಇಂ(ಕ), ಕಾರ್ಯ ಮತ್ತು ಪಾಲನಾ ವಿಭಾಗ ಮಡಿಕೇರಿ.
2. ಶ್ರೀ ದೇವಯ್ಯ, ಸ.ಕಾ.ನಿ.ಇಂ(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಮಡಿಕೇರಿ.
3. ಶ್ರೀ ಡಿ. ಎನ್. ನೀಲ ಶೆಟ್ಟಿ, ಸ.ಕಾ.ನಿ.ಇಂ(ಕ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಗೋಣಿಕೊಪ್ಪಲು.
4. ಶ್ರೀ ಸೈಯ್ಯದ್ ಅಬ್ರಾರ್, ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಗೋಣಿಕೊಪ್ಪಲು.
5. ಶ್ರೀ ಕೃಷ್ಣಕುಮಾರ್,ಪ್ರಭಾರ ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
6. ಶ್ರೀ ಮನುಕುಮಾರ್,ಪ್ರಭಾರ ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
7. ಶ್ರೀ ರಂಗಸ್ವಾಮಿ, ಶಾಖಾಧಿಕಾರಿ, ಬಾಳೆಲೆ ಶಾಖೆ.

ದಿನಾಂಕ: 24-12-2021 ರಂದು ಪಡೆದ ದೂರುಗಳ ವಿವರ:-

| ಕ್ರ. ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ. | ಷರಾ |
|---|---|---|---|---|
| 1. | ಜಿ. ಎನ್. ಪೂಣಚ್ಚ, ಕೆ.ಬಾಡಗ ಗ್ರಾಮ, ಶ್ರೀಮಂಗಲ ಮೊ:9483397990 | * ಇವರು ತಮ್ಮ ಗದ್ದೆಯ ಮಧ್ಯದಲ್ಲಿ 11 ಕೆ.ವಿ. ವಿದ್ಯುತ್ ಲೈನ್ ಹಾದು ಹೋಗಿದ್ದು, ಸದರಿ ವಿಷಯದ ಬಗ್ಗೆ ಹಲವು ಸಭೆಗಳಲ್ಲಿ ಬಂದು ದೂರು ನೀಡಿದ್ದು, ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ ಮತ್ತು ಹಿಂದೆ ಇದ್ದ ಶಾಖಾಧಿಕಾರಿ ರವರುಗಳು ಬಂದು ಸ್ಥಳ ಪರಿಶೀಲಿಸಿದ್ದು, ಇದುವರೆವಿಗೂ ಸರಿಪಡಿಸಿರುವುದಿಲ್ಲ ಎಂದು ದೂರು ನೀಡಿರುತ್ತಾರೆ.<br>* ಇವರು ತಮ್ಮ ದೂರಿನಲ್ಲಿ ಮಾಪಕ ಓದುಗರು ಸರಿಯಾದ ರೀತಿಯಲ್ಲಿ ರೀಡಿಂಗ್ ನೀಡುತ್ತಿಲ್ಲ ಮತ್ತು ಸುರೇಶ್ ಮತ್ತು ರಮೇಶ್, ಮಾರ್ಗದಾಳುಗಳು ಸರಿಯಾದ ರೀತಿಯಲಲಿ ದೂರುಗಳನ್ನು ಸರಿಪಡಿಸುತ್ತಿಲ್ಲ ಎಂದು ದೂರು ನೀಡಿರುತ್ತಾರೆ. | * ಈ ದೂರಿನ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ರವರು ಮಾತನಾಡಿ ಸ್ಥಳ ಪರಿಶೀಲಿಸಿ ಸದರಿ ಸಮಸ್ಯೆಯನ್ನು ಸರಿಪಡಿಸಲು ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಚೇರಿಗೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.<br>* ಸದರಿ ದೂರಿನ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ರವರು ಮಾತನಾಡಿ ಸರಿಯಾದ ರೀತಿಯಲ್ಲಿ ರೀಡಿಂಗ್ ಮಾಡಲು ಮಾಪಕ ಓದುಗರುಗಳಿಗೆ ಸೂಚಿಸುವಂತೆಯೂ ಮತ್ತು ಸದರಿ ಮಾರ್ಗದಾಳುಗಳಿಗೆ ಕಾರಣ ಕೇಳಿ ನೋಟೀಸ್ ಜಾರಿಮಾಡುವಂತೆ ಸೂಚಿಸಿರುತ್ತಾರೆ. | |
| 2. | ಕೆ. ಜಿ. ಜೆಪ್ರಿ, ಕೈಕೇರಿ ಗ್ರಾಮ ಕಾವೇರಿ ಕಾಲೇಜು ಹತ್ತಿರ, ಗೋಣಿಕೊಪ್ಪಲು ಮೊ:9449748339 | *ಇವರು ತಮ್ಮ ದೂರಿನಲ್ಲಿ ತಿಳಿಸಿರುವುದೇನೆಂದರೆ, ತಮ್ಮ ಸ್ವಂತ ತೋಟದ ಒಳಗೆ ಮಾಲೀಕರನ್ನು ಕೇಳದೆ ವಿದ್ಯುತ್ ಕಂಬಗಳನ್ನು ಹಾಕಿದ್ದು, ಸದರಿ ಕಂಬಗಳನ್ನು ಬದಲಾಯಿಸಲು ಸೂಚಿಸಿದ್ದು, ಇದುವರೆವಿಗೂ ಕಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ದೂರು ನೀಡಿರುತ್ತಾರೆ. | * ಈ ದೂರಿನ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ರವರು ಮಾತನಾಡಿ ಸಮಸ್ಯೆಯನ್ನು ಅತೀ ಜರೂರಾಗಿ ಸರಿಪಡಿಸಿಕೊಡುವಂತೆ ಗೋಣಿಕೊಪ್ಪಲು ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. | |

| | | | | |
|---|---|---|---|---|
| 3. | ಚೆಪ್ಪುಡೀರ ರಾಕೇಶ್. ಗ್ರಾಮ ಪಂಚಾಯಿತಿ ಅಧ್ಯಕ್ಷರು. ಕಿರುಗೂರು ಗ್ರಾಮ. ಮೊ: 9901002009 | * ಸದರಿಯವರು ತಮ್ಮ ದೂರಿನಲ್ಲಿ ತಿಳಿಸಿರುವುದೇನೆಂದರೆ ಪೊನ್ನಂಪೇಟೆಯಿಂದ ಕಿರುಗೂರು ಗ್ರಾಮದ ಮೂಲಕ ಹಾದು ಹೋಗಿರುವ ಎಬಿ ಕೇಬಲ್ ಗಳನ್ನು ಕಳಚಿ. 12 ಕೆ.ವಿ. ವಿದ್ಯುತ್ ವೈರ್ ಗಳನ್ನು ಸರಿಯಾದ ರೀತಿಯಲ್ಲಿ ಅಳವಡಿಸಲು ದೂರು ನೀಡಿರುತ್ತಾರೆ ಮತ್ತು ಅದರಿಂದ ಆಗುವ ಪ್ರಯೋಜನ ಏನು ಎಂದು ಪ್ರಶ್ನಿಸಿರುತ್ತಾರೆ.<br>* ಸದರಿಯವರು ದೂರಿನ ಬಗ್ಗೆ ಮಾತನಾಡುತ್ತಾ ಐಪಿ ಸ್ಥಾವರಗಳ ಬಿಲ್ಲುಗಳ ಬಗ್ಗೆ ಚರ್ಚಿಸಿ. ಬಿಲ್ಲ್ ನೀಡದಿರುವ ಸ್ಥಾವರಗಳ ವಿದ್ಯುತ್ ನಿಲುಗಡೆ ಮಾಡದಂತೆ ದೂರು ನೀಡಿರುತ್ತಾರೆ.<br>* ಸದರಿಯವರು ಮಾತನಾಡುತ್ತಾ ಐಪಿ ಸ್ಥಾವರಗಳ ಜಕಾತಿಗಳು ಎಲ್.ಟಿ. 4ಎ ಎಂದು ನಮೂದಾಗಿರುವುದನ್ನು ಎಲ್.ಟಿ. 4ಸಿ ಎಂದು ನಮೂದಿಸಿರುತ್ತೀರಿ ಇದನ್ನು ಆದಷ್ಟು ಬೇಗನೆ ಸರಿಪಡಿಸುವಂತೆ ದೂರು ನೀಡಿರುತ್ತಾರೆ.<br>* ತಮ್ಮ ದೂರಿನ ಬಗ್ಗೆ ಮಾತನಾಡುತ್ತಾ ಎಬಿ ಕೇಬಲ್ ವಯರ್ ಕಟ್ಟಾಗಿ ಜೋತು ಬಿದ್ದಿದ್ದು, ಇದನ್ನು ಸಹ ಸರಿಪಡಿಸಿರುವುದಿಲ್ಲ ಎಂದು ದೂರು ನೀಡಿರುತ್ತಾರೆ. | * ಈ ದೂರಿನ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ರವರು ಮಾತನಾಡಿ ಎಬಿ ಕೇಬಲ್ ಗಳನ್ನು ಕಳಚಿಸಿ ಸರಿಪಡಿಸಿ ಕೊಡುತ್ತೇನೆಂದು ಸೂಚಿಸಿರುತ್ತಾರೆ<br>* ಐಪಿ ಸ್ಥಾವರಗಳ ವಿದ್ಯುತ್ ನಿಲುಗಡೆ ಮಾಡಿರು ಸ್ಥಾವರಗಳನ್ನು ಸರಿಪಡಿಸಿ ವಿದ್ಯುತ್ ಸಂಪರ್ಕ ನೀಡುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಗೋಣಿಕೊಪ್ಪಲು ರವರಿಗೆ ಸೂಚಿಸಿರುತ್ತಾರೆ.<br>* ಜಾಕಾತಿಗಳ ಬದಲಾವಣೆಗಳನ್ನು ಮಾಡಿ ಗ್ರಾಹಕರಿಗೆ ಸರಿಯಾದ ರೀತಿಯಲ್ಲಿ ಸ್ಪಂದಿಸುವಂತೆ ಸೂಚಿಸಿರುತ್ತಾರೆ.<br>* ಸದರಿ ದೂರಿನಲ್ಲಿ ಸೂಚಿಸಿರುವ ಎಬಿ ಕೇಬಲ್ ಜೋತುಬಿದ್ದುರುವುದನ್ನು ಸ್ಥಳ ಪರಿಶೀಲಿಸಿ ಸರಿಪಡಿಸುವಂತೆ ಶಾಖಾಧಿಕಾರಿ, ಗೋಣಿಕೊಪ್ಪಲು ರವರಿಗೆ ಸೂಚಿಸಿರುತ್ತಾರೆ. | |
| 4. | ಮಾಚಯ್ಯ, ಕೊಟ್ಟಗೇರಿ ಗ್ರಾಮ, ಬಾಳೆಲೆ. ಮೊ:8277386723 | *ಸದರಿಯವರು ತಮ್ಮ ದೂರಿನಲ್ಲಿ ತಿಳಿಸಿರುವುದೇನೆಂದರೆ ಸದರಿಯವರ ಸ್ಥಾವರಕ್ಕೆ ಸಂಬಂಧಿಸಿರುವ ಕಡತವು ಕಳೆದುಹೋಗಿದ್ದು, ಇದುವರೆವಿಗೂ ಕಡತವನ್ನು ಹುಡುಕಿ ಆರ್. ಆರ್. ಸಂಖ್ಯೆ ನೀಡಿರುವುದಿಲ್ಲ, ಕಡತವು ಎಲ್ಲಿ ಇದೆ ಎಂದು ದೂರು ನೀಡಿರುತ್ತಾರೆ.<br>* ಸದರಿಯವರು ತಮ್ಮ ದೂರಿನ ಬಗ್ಗೆ ಮಾತನಾಡುತ್ತಾ ಜನ ಸಂಪರ್ಕ ಸಭೆಗಳನ್ನು ನಡೆಸುವಾಗ ಒಂದು ವಾರದ ಮುಂಚಿತವಾಗಿ ಪತ್ರಿಕಾ ಪ್ರಕಟಣೆ ನೀಡುವಂತೆ ದೂರು ನೀಡಿರುತ್ತಾರೆ ಮತ್ತು ಹೋಬ್ಳಿ ಮಟ್ಟದಲ್ಲಿ ಸಭೆ ನಡೆಸುವಂತೆ ದೂರು ನೀಡಿರುತ್ತಾರೆ. | * ಈ ದೂರಿನ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ರವರು ಮಾತನಾಡಿ ಕೂಡಲೇ ಕಡತವನ್ನು ಹುಡುಕಿ ಸರಿಪಡಿಸಿ ಆರ್. ಆರ್. ಸಂಖ್ಯೆ ನೀಡುವಂತೆ ಸೂಚಿಸಿರುತ್ತಾರೆ.<br>* ನಂತರ ದೂರಿನ ಬಗ್ಗೆ ಮಾತನಾಡುತ್ತಾ ನಂತರದ ದಿನಗಳಲ್ಲಿ ಹೋಬ್ಳಿ ವ್ಯಾಪ್ತಿಲ್ಲಿ ಸಭೆ ನಡೆಸಲು ಕ್ರಮ ಕೈಗೊಳ್ಳುತ್ತೇನೆಂದು ಸೂಚಿಸಿರುತ್ತಾರೆ. | |
| 5. | ಪೂರ್ಣಿಮ, ಕೋಂ: ವಿ. ಕೆ. ಯೊಗೇಶ್, ಕೊತೂರು ಗ್ರಾಮ, ಬಾಳೆಲೆ ಮೊ: 9483109210 | *ಸದರಿಯವರು ತಮ್ಮ ದೂರಿನಲ್ಲಿ ಸೂಚಿಸಿರುವುದೇನೆಂದರೆ. ಹಿಂದೆ ಇದ್ದ ಪ್ರಭಾರ ಶಾಖಾಧಿಕಾರಿ ಮನುಕುಮಾರ್ ರವರು ತಮ್ಮ ಸ್ಥಾವರಕ್ಕೆ ಪರಿವರ್ತಕಗಳನ್ನೊಳಗೊಂಡಂತೆ ವಿದ್ಯುತ್ ಸಂಪರ್ಕವನ್ನು ನೀಡಿದ್ದು, ಇದುವರೆವಿಗೂ ಆರ್. ಆರ್. ಸಂಖ್ಯೆ ನೀಡದೆ ಕಡತ ಎಲ್ಲಿ ಇದೆ ಎಂದು ತಿಳಿದಿರುವುದಿಲ್ಲ. ಅಲ್ಲದೆ ಈಗ ಬಿಲ್ಲ್ ನೀಡದಿರುವ ಕಾರಣ ವಿದ್ಯುತ್ ನಿಲುಗಡೆ ಗೊಳಿಸಿರುತ್ತಾರೆ ಎಂದು ದೂರು ನೀಡಿರುತ್ತಾರೆ. | * ಈ ದೂರಿನ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ರವರು ಮಾತನಾಡಿ ಶಾಖಾಧಿಕಾರಿ, ಬಾಳೆಲೆ ರವರಿಗೆ ಸ್ಥಳ ಪರಿಶೀಲಿಸಿ ಕೂಡಲೆ ಆರ್. ಆರ್. ಸಂಖ್ಯೆ ನೀಡುವಂತೆ ಸೂಚಿಸಿರುತ್ತಾರೆ. | |

| | | | | |
|---|---|---|---|---|
| 6. | ಆಶಿಕ್, ಬಾಳೆಲೆಲ ಗ್ರಾಮ. ಮೊ:9008505644 **ಮತ್ತು** ಮನೋಜ್ ಮಾದಪ್ಪ, ಬಾಳೆಲೆ ಗ್ರಾಮ. ಮೊ:97407049661 | * ಇವರು ತಮ್ಮ ದೂರಿನಲ್ಲಿ ಆರ್. ಆರ್. ಸಂಖ್ಯೆ ನೀಡದೇ ಯಾವ ರೀತಿಯಲ್ಲಿ ಮೀಟರ್ ಗಳನ್ನು ಅಳವಡಿಸಿರುತ್ತತೀರಿ ಮತ್ತು ಆರ್. ಆರ್. ಸಂಖ್ಯೆ ನೀಡದೆ ಬಿಲ್ಲ್ ಕಟ್ಟಲಾಗದ ಸ್ಥಾವರಗಳನ್ನು ನಿಲುಗಡೆ ಗೊಳಿಸಿರುತ್ತೀರಿ. ಇಂತಹ ಸ್ಥಾವರಗಳನ್ನು ವಿದ್ಯುತ್ ಸಂಪರ್ಕ ನೀಡುವಂತೆ ದೂರು ನೀಡಿರುತ್ತಾರೆ.<br>* ಐಪಿ ಸ್ಥಾವರಕ್ಕೆ ಮಾಪಕವನ್ನು ಅಳವಡಿಸಿದ್ದು, 2 ವರ್ಷಗಳಾದರೂ, ಈ ಒಂದು ತಿಂಗಳ ಹಿಂದೆ ಆರ್. ಆರ್. ಸಂಖ್ಯೆ ನೀಡಿದ್ದು, ಸದರಿ ಸ್ಥಾವರವು ಅಳವಡಿಸಿರುವ ದಿನಾಂಕದಿಂದ ಈ ದಿನಗಳವರೆಗಿನ ಪ್ರತೀ ವಿವರಗಳನ್ನು ನೀಡುವಂತೆ ದೂರು ನೀಡಿರುತ್ತಾರೆ. | * ಈ ದೂರಿನ ಬಗ್ಗೆ ಕಾರ್ಯನಿರ್ವಾಹಕ ಇಂಜನಿಯರ್(ವಿ), ಮಡಿಕೇರಿ ರವರು ಮಾತನಾಡಿ ಶಾಖಾಧಿಕಾರಿ, ಬಾಳೆಲೆ ರವರಿಗೆ ಸದರಿ ವಿಷಯದ ಬಗ್ಗೆ ಚರ್ಚಿಸುತ್ತಾ ಕಡತಗಳನ್ನು ಸರಿಪಡಿಸಿ ಆರ್. ಆರ್. ಸಂಖ್ಯೆಗಳನ್ನು ನೀಡುವಂತೆಯೂ ಮತ್ತು ವಿದ್ಯುತ್ ನಿಲುಗಡೆಗೊಳಿಸಿರುವ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನೀಡುವಂತೆ ಸೂಚಿಸಿರುತ್ತಾರೆ.<br>* ಸದರಿಯವರ ದೂರಿನ ಬಗ್ಗೆ ಮಾತನಾಡುತ್ತಾ ಹಿರಿಯ ಸಹಾಯಕರು, ಗೋಣಿಕೊಪ್ಪಲು ಉಪ-ವಿಭಾಗ ರವರಿಗೆ ಸದರಿ ದೂರಿನಲ್ಲಿ ಕೇಳಿರುವ ವಿವರಗಳನ್ನು ಗ್ರಾಹಕರಿಗೆ ಸಲ್ಲಿಸುವಂತೆ ಸೂಚಿಸಿರುತ್ತಾರೆ. | |

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
**ಕಾರ್ಯ ಮತ್ತು ಪಾಲನೆ ವಿಭಾಗ**
ಚಾ.ವಿ.ಸ.ನಿ.ನಿ., ಮಡಿಕೇರಿ.

ಪ್ರತಿಯನ್ನು:-

1. ಮಾನ್ಯ ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ., ಮೈಸೂರು ರವರ ದಯಾಪರವಗಾಹನೆಗೆ ಸಲ್ಲಿಸಲಾಗಿದೆ.
2. ಅಧೀಕ್ಷಕ ಇಂಜಿನಿಯರ್ (ವಿ),ಕಾ ಮತ್ತು ಪಾ ವೃತ್ತ, ಶ್ರೀ ಹರ್ಷ ರಸ್ತೆ, ಮೈಸೂರು. ಇವರ ದಯಾಪರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ-ವಿಭಾಗ, ಗೋಣಿಕೊಪ್ಪಲು ಉಪ-ವಿಭಾಗ ರವರ ಮಾಹಿತಿಗಾಗಿ
4. ಸಇಂ(ವಿ)/ಮುಕ